ಹೆಲ್ಲೆನ್ ಕೆಲ್ಲೆರ್

ಲೇಖಕ : ಡೇವಿಡ್ ಆ ಎಲ್ಡರ್

ಸಚಿತ್ರಕಾರ : ಜಾನ್ ವಲ್ನರ್

ಅನುವಾಧಕಿ : ಸಬಿತಾ



ಹೆಲೆನ್ ಕೆಲ್ಲರ್ ಗೆ ಕಣ್ಣು ಕಣ್ಣಿಸುತಿರಲಿಲ್ಲ ಮತ್ತು ಕೀವಿ ಕೇಳ್ಳಿಸುತಿರಲ್ಲಿಲ.

ಆದರೆ ಅವರು ಚಿಕ್ಕವಯುಸಿನಿಂದ ತಮ್ಮ ಕ್ಯ್ ಯಿಂದ ಮಾತನಾಡುವದನ್ನು ಮತ್ತು ಬರೆಯುವಧನ್ನು ಕಲಿತಿದ್ದರು.

ನಂತರದ ವರ್ಷಗಳಲಿ ಅವರು ಅನೇಕ ಪುಸ್ತಕಗಳನ್ನು ಬರೆದರು ಮತ್ತು ವಿವಿಧ ಸ್ಥಾಳ್ಳಗಳಲ್ಲಿ ಭಾಷಣಗಳನ್ನು ನೀಡಿದರು.

ಶಾಂತಿ ಮತ್ತು ಸಮಾನ ಅಧಿಕಾರಕಾಗಿ ಅವರು ಹೋರಾಡಿದರು.

ಅವರು ಅನೇಕ ಜನರಿಗೆ ತಮ್ಮ ಕನಸುಗಳನ್ನು ಸಾಧಿಸಬಹುದು ಎಂಬ ಭರವಸೆಯನ್ನು ನೀಡಿದರು.

ಹೆಲೆನ್ ಕೆಲ್ಲರ್, ಅವರ ಕಾಲದ ಒಬ್ಬ ಮಹಾನ್ ಮಹಿಳೆ.

ಹೆಲ್ಲೆನ್ ಕೆಲ್ಲೆರ್

ಲೇಖಕ : ಡೇವಿಡ್ ಆ ಎಲ್ಡರ್

ಸಚಿತ್ರಕಾರ : ಜಾನ್ ವಲ್ನರ್

ಅನುವಾಧಕಿ : ಸಬಿತಾ



ಜೋನಾಥನ್ ಮತ್ತು ಲೇಹ್ ಗೆ

ಶಾನ, ಡೇವಿಡ್ ಮತ್ತು ಶಿರಾ ಗೆ

ಡಿ.ಎ.ಎ.

ಎನಾದರೂ ಆಗುವುದೆಂದು
ಬಡಿಯುವ ಹೃದಯದಿಂದ ಕಾಯುತ್ತಿರುವ
ಬಂಡಾಯದ ಆತ್ಮಕ್ಕಾಗಿ .
ಜೆ. ಸಿ. ಡಬ್ಲ್ಯೂ .

ವಿಷಯಸೂಚಿ



1. ಅನಾರೋಗ್ಯ

ಹೆಲೆನ್ ಕೆಲ್ಲರ್ ಒಬ್ಬ ಬರಹಗಾರ್ತಿ ಮತ್ತು ಭಾಷಣಕಾರರಾಗಿದ್ದರು.

ಅವಳು ರಾಷ್ಟ್ರಪತಿಗಳ ಸ್ನೇಹಿತೆಯಾಗಿದ್ದಳು.

ಹೆಲೆನ್ ಕಿವುಡಿ ಮತ್ತು ಕುರುಡಿಯಾಗಿದ್ದಳು.

ಈ ಸವಾಲುಗಳ ಹೊರತಾಗಿಯೂ, ಅವರನ್ನು ಅವರ ಕಾಲದ ಶ್ರೇಷ್ಠ ಮಹಿಳೆಯರಲ್ಲಿ ಒಬ್ಬರೆಂದು ಪರಿಗಣಿಸಲಾಯಿತು .



ಹೆಲೆನ್ ಜೂನ್ ೨೭, ೧೮೮೦ ರಂದು ಜನಿಸಿದರು.

ಅವಳು ಅಲಬಾಮಾದ ಒಂದು ಸಣ್ಣ ಜಿಲ್ಲೆಯಲ್ಲಿ ಜನಿಸಿದಳು.

ಹೆಲೆನ್ ಸುಂದರ ಮಗುವಾಗಿದ್ದಳು ಮತ್ತು ತುಂಬಾ ಬುದ್ಧಿವಂತೆಯಾಗಿದಳು.

ಅವಳು ಆರು ತಿಂಗಳ ವಯಸಿನಲ್ಲೇ ಮಾತನಾಡಲು ಪ್ರಾರಂಭಿಸಿದಳು.

ಅವಳು ತನ್ನ ಮೊದಲನೇ ಹುಟ್ಟುಹಬ್ಬದ ಮೊದಲೇ ನಡೆಯಲು ಪ್ರಾರಂಭಿಸಿದ್ದಳು.





ಆದರೆ ತನ್ನ ಎರಡನೇ ಹುಟ್ಟುಹಬ್ಬದ ಕೆಲವು ತಿಂಗಳ ಮೊದಲು, ಹೆಲೆನ್ ಅನಾರೋಗ್ಯಕ್ಕೆ ಒಳಗಾದಳು. ಆ ಮಗು ಎಷ್ಟು ಅಸ್ವಸ್ಥವಾಗಿತ್ತೆಂದರೆ, ವೈಧ್ಯರು ಅದು ಸತ್ತುಹೋಗುತ್ತದೆ ಎಂದು ಭಾವಿಸಿದ್ದರು.

ಹೆಲೆನ್ ಬದುಕುಳಿದರು, ಆದರೆ ಅವರು ನೋಡುವ ಮತ್ತು ಕೇಳುವ ಸಾಮರ್ಥ್ಯವನ್ನು ಕಳೆದುಕಂಡರು.

ಈ ಘಟನೆಯ ನಂತರ, ಹೆಲೆನ್ ಅವರ ಪ್ರಪಂಚ ಕತ್ತಲೆ ಮತ್ತು ಮೌನವಾಗಿಹೋಯಿತು.



2. ಅಂಧಕಾರದಿಂದ ಬೆಳಕಿನೆಡೆಗೆ

ಹೆಲೆನ್ ಕೆಲೆರ್ ಗೆ ಜನರ ಮಾತುಗಳು ಕೇಳಿಸದ ಕಾರಣ, ಅವರು ಹೊಸ ಪದಗಳನ್ನು ಕಲಿಯಲಿಲ್ಲ.

ಶೀಘ್ರದಲೇ ಅವಳು ಮೊದಲು ತಿಳಿದಿದ್ದ ಪದಗಳನ್ನು ಸಹ ಮರೆತುಬಿಟ್ಟಳು. ಹೆಲೆನ್ ತನ್ನನ್ನು ತಾನು ವ್ಯಕ್ತಪಡಿಸಿಕೊಳ್ಳಲು ತನ್ನದೇ ಆದ ಮಾರ್ಗವನ್ನು ಹೊಂದಿದ್ದಳು.

ಅವಳು ಯಾರನ್ನಾದರೂ ತಳ್ಳಿದಾಗ, ಅವಳ ಅರ್ಥ "ಹೋಗು" ಎಂದಾಗಿತ್ತು !

ಅವಳು ಯಾರನ್ನಾದರೂ ತನ್ನ ಹತ್ತಿರ ಎಳೆದಾಗ, ಅವಳ ಅರ್ಥ ‘’ಬಾ" ಎಂದಿತ್ತು !

ಹೆಲೆನ್ ಕನ್ನಡಕ ಧರಿಸಿದಂತೆ ನಟಿಸಿದಾಗ, ಅದರ ಅರ್ಥ 'ತಂದೆ‘ ಎಂದಿತ್ತು !







ಹೆಲೆನ್ ಅವರು ಸುಮಾರು ೬೦ ಅಂತಹ ಸನ್ನೆಗಳನ್ನು ಉಪಯೋಗಿಸಿತ್ತಿದ್ದರು.

ಅವರು ಬಹಳಷ್ಟು ಹೇಳಲು ಬಯಸುತಿದ್ದರು ಆದರೆ ಅವರಿಗೆ ಹೇಳಲು ಸಾದ್ಯವಾಗುತಿರಲಿಲ್ಲ.

ಅನೇಕ ಬಾರಿ ಹೆಲೆನ್ ಜನರ ತುಟಿಗಳನ್ನು ಸ್ಪರ್ಶಿಸುತಾಳೆ, ಅವರ ತುಟಿಗಳು ಚಲಿಸಿದಾಗ, ಅವರು ಏನಾದರು ಹೇಳುತಿದ್ದರೆಂದು ಅವಳು ಅರ್ಥ ಮಾಡಿಕೊಳ್ಳುತಿದಳು.

ಅದರೆ ಅವರು ಏನು ಹೇಳುತಿದ್ದರೆಂದು ಅವಳಿಗೆ ಅರ್ಥವಾಗುತಿರಲಿಲ್ಲ.

ಹೆಲೆನ್ ಕೂಡಾ ತನ್ನ ತುಟಿಗಳನ್ನು ಚಲಾಯಿಸುತಾಳೆ, ಕೈಗಳನ್ನು ಬಿಸುತ್ತಾಳೆ ಆದರೆ ಅವಳು ನಿಜವಾಗಿ ಏನನ್ನು ಹೇಳುತ್ತಿಲ್ಲ ಎಂದು ಅವಳಿಗೆ ತಿಳಿದಿರುತ್ತದೆ.



''ಇದರಿಂದ ನನಗೆ ತುಂಬಾ ಕೋಪಬಂತು'', ನಾನು ಕೋಪದಿಂದ ಒದ್ದೆ ಮತ್ತು ಕಿರುಚಾಡಿದೆ ಎಂದು ನಂತರ, ಹೆಲೆನ್ ಬರೆದಿರುವುದುಂಟು. ಆಕೆಯ ಪೋಷಕರು ಅವಳನ್ನು ವೈದ್ಯರ ಬಳಿಗೆ ಕರೆದೊಯ್ದರು, ಆದರೆ ಹೆಲೆನಗೆ ನೋಡಲು ಮತ್ತು ಕೇಳಲು ಸಹಾಯ ಮಾಡಲು ಅವರ ಎರಿಂದಲೂ ಅಗಲಿಲ್ಲ. ಇದರನಂತರ, ಕೆಲ್ಲೆರ್ಸ್ ಹೆಲೆನಗಾಗಿ ಒಬ್ಬ ಶಿಕ್ಷಕನನ್ನು ಹುಡುಕಲಾರಂಭಿಸಿದರು.

ಅವರು ಅಲೆಕ್ಸಾಂಡರ್ ಗ್ರಹಾಂ ಬೆಲ್ ಅವರನ್ನು ಭೇಟಿಯಾಗಲು ವಾಷಿಂಗ್ಟನ್.ಡಿ.ಸಿ.ಗೆ ಹೋದರು. ಅಲೆಕ್ಸಾಂಡರ್ ಗ್ರಹಾಂ ಬೆಲ್ ದೂರವಾಣಿಯನ್ನು ಕಂಡುಹಿಡಿದಿದರು. ಡಾ. ಬೆಲ್ಲ ಒಮ್ಮೆ ಕಿವುಡರ ಶಾಲೆಯಲ್ಲಿ ಶಿಕ್ಷಕರಾಗಿದ್ದರು .



"ನನ್ನ ಸನ್ನೆಗಳನ್ನು ಅವರು ಅರ್ಥಮಾಡಿಕೊಂಡರು". ಎಂದು ಹೆಲೆನ್ ನಂತರ ಬರೆದರು. 'ನನಗೆ ಅದು ಗೊತ್ತಾಯಿತು ಮತ್ತು ನಾನು ಒಮ್ಮೆಲೇ ಅವರನ್ನು ಪ್ರೀತಿಸಲಾರಂಭಿಸಿದೆ''.

ಡಾ.ಬೆಲ್ ಹೆಲೆನಗೆ ಒಬ್ಬ ಶಿಕ್ಷಿಕಿಯನ್ನು ಹುಡುಕಲು ಸಹಾಯ ಮಾಡಿದರು.

3. ಆ ಜೀವಂತ ಜಗತ್ತು





"ನನ್ನ ಜೀವನದ ಅತಿ ಮುಖ್ಯವಾದ ದಿನ, ನನ್ನ ಶಿಕ್ಷಕಿ ಅನ್ನಾ ಮ್ಯಾನ್ಸ್ ಫೀಲ್ಡ್ ಸಲಿವಾನ್ ನನ್ನ ಬಳಿ ಬಂದ ದಿನ', ಹೆಲೆನ್ ನಂತರ ಬರೆದರು.

ಆ ದಿನಾ ೩ ಮಾರ್ಚ್ ೧೮೮೭ರ ದಿನವಾಗಿತ್ತು. ಆಗ ಹೆಲೆನ್ ಆರು ವರ್ಷದವಳಾಗಿದ್ದಳು .



ಹೆಲೆನ್ನಿನ ಮೊದಲ ಪಾಠಕೆ ಅನ್ನಾ ಅಂಗ್ಯೆ ಮೇಲೆ ಬೆರಳಿನಿಂದ ಬರೆದ ಅಕ್ಷರಗಳನ್ನು ಬಳಸಿದರು.

ಅವರು ಹೆಲೆನಿನ ಅಂಗ್ಯೆ ಮೇಲೆ ಡ-ಒ-ಎಲ್-ಎಲ್ (ಡಾಲ್ ಅಂಥರೆ ಗೊಂಬೇ) ಬರೆದರು ಮತ್ತು ಹೆಲೆನ್ನಿನ ಕ್ಯಾಯಲ್ಲಿ ತದನಂತರ ಅವರು ಒಂದು ಗೊಂಬೆಯನ್ನು ಇಟ್ಟರು.

ಹೆಲೆನಿಗೆ ಇದು ಒಂದು ಆಟವಾಗಿತ್ತು ಅಷ್ಟೇ.




ಅವಳಿಗೆ ತನ್ನ ಅಂಗ್ಯೆಯಲ್ಲಿ ಬರೆದಿದ್ದ ಆ ಒಂದು ಪದ "ಗೊಂಬೆ" ಎಂದು ತಿಳಿದಿರಲಿಲ್ಲ.

ಪ್ರತಿಯೊಂದು ವಸ್ತುವಿಗೂ ಒಂದು ಹೆಸರು ಇದೆ ಎಂದು ಅವಳಿಗೆ ಗೊತ್ತಿರಲಿಲ್ಲ .

ಒಂದು ದಿನ ವಾಕಿಂಗ್ ಮಾಡುವಾಗ ಅನ್ನಾ ಮತ್ತು ಹೆಲೆನ್ ನೀರಿನ ಪಂಪ್ ಬಳಿ ಬಂದರು.

ಅನ್ನಾ ಹೆಲೆನಿನ ಕ್ಯಯನ್ನು ನೀರಿನಲ್ಲಿ ಹಾಕಿದರು. ಅವಾಗ ಅವರು ಹೆಲೆನಿನ ಎರಡನೆ ಅಂಗ್ಯೆ ಮೇಲೆ ಡಬ್ಲ್ಯೂ-ಆ-ಟಿ-ಈ-ರ (ವಾಟರ್ ಅಂದರೆ ನೀರು) ಬರೆದರು.

ಹಠಾತ್ತನೆ, ಅನ್ನಾ ತನಗೆ ಏನು ಕಲಿಸಲು ಪ್ರಯತ್ನಿಸುತಿದ್ದಾಳೆಂದು ಹೆಲೆನಗೆ ತಿಳಿಯಿತು!







ಅಗಾ ಅವಳಿಗೆ ಪ್ರತಿಯೊಂದು ವಸ್ತುವಿಗೂ ಒಂದು ಹೆಸರಿದೆ ಎಂದು ಅರ್ಥವಾಯಿತು.

ಆ ದಿನ ಹೆಲೆನ್ ಅನೇಕ ಹೊಸ ಪದಗಳನ್ನು ಕಲಿತಳು.

ಆ ರಾತ್ರಿ, ಮೊದಲ ಬಾರಿಗೆ, ಹೆಲೆನ್ ಕೆಲ್ಲೆರ್ ಒಂದು ಹೊಸ ದಿನಕ್ಕಾಗಿ ಕಾತರದಿಂದ ಕಾಯಲಾರಂಭಿಸಿದಳು .

4. ನಂಬಿಕೆ ಮತ್ತು ಪ್ರೀತಿ



ಹೆಲೆನ್ ನೂರಾರು ನಂತರ ಸಾವಿರಾರು ಹೊಸ ಶಬ್ದಗಳನ್ನು ಕಲಿತರು.

ಅವರು ತಮ್ಮ ಕೈ ಇಂದ ಮಾತನಾಡುವದು ಮತ್ತು ಕೇಳುವದನು ಕಲಿತರು.



ಕಾಗದದ ಮೇಲೆ ಸಣ್ಣ ಉಬ್ಬುಗಳನ್ನು ಅನುಭವಿಸುವ ಮೂಲಕ ಅವಳು ಓದಲು ಕಲಿತಳು. ಕುರುಡರಿಗಾಗಿ ಮಾಡಿರುವ ಈ ತರಹದ ವಿಶೇಷ ಲಿಪಿ ಎನ್ನು ಬ್ರೈಲ್ ಲಿಪಿ ಎಂದು ಕರಿಯುತ್ತಾರೆ. ಹೆಲೆನ್ ಹತ್ತು ವರ್ಷದ ವಯಸಿನಲ್ಲಿ ಮಾತನಾಡಲು ಕಲಿತಳು. ಹೆಲೆನ್ ಗೆ ತಾನು ಮಡಿದ ಅಥವಾ ಬೇರೆಯವರು ಮಡಿದ ಧ್ವನಿಗಳು ಕೇಳಿಸುತ್ತಿರಲಿಲ್ಲ. ಅದರಿಂದ ಅವಳು ಸ್ಪಷ್ಟವಾಗಿ ಮಾತಾಡಲು ಯಾವಾಗಲು ಕಲಿಯಲಿಲ್ಲ.

ಹೆಲೆನ್ ೧೯೦೦ ನಲ್ಲಿ ರಾಡ್ಕ್ಲಿಫ್ ಕಾಲೇಜ್ ಗೆ ಓದುವದಕ್ಕಾಗಿ ಹೋದರು. ಅನ್ನಾ ಸಲ್ಲಿವನ್ ಅವಳ ಪಕ್ಕದಲಿ ಕುಳಿತರು. ತರಗತಿಯಲ್ಲಿ ಹೇಳಿದ್ದೆಲವನ್ನು ಅವರು ಹೆಲೆನಿನ್ ಅಂಗ್ಯೆಯ ಮೇಲೆ ಬರೆದು ಅವಳಿಗೆ ಹೇಳುತ್ತಿದ್ದರು. ಕಾಲೇಜ್ನಲ್ಲಿ ಓದುತ್ತಿರುವಾಗ ಹೆಲೆನ್ 'ದಿ ಸ್ಟೋರಿ ಅಫ್ ಮೈ ಲೈಫ್' ಹೆಸರಿನ ಪುಸ್ತಕವನ್ನು ಬರೆದರು. ಪ್ರಪಂಚದಾದ್ಯಂತ ಜನರು ಈ ರಚನೆಯನ ಓದಿದರು.





ಇದಾದ ಮೇಲೆ ಹೆಲೆನ್ ಅನ್ಯ ಪುಸ್ತಕಗಳನ್ನು ಬರೆದರು. ಅವರು ಅಮೆರಿಕಾದಾದ್ಯಂತ ಪ್ರಯಾಣ ಮಾಡಿದರು.

ಅವರು ಹೋದಲ್ಲೆಲ್ಲ ಸಾವಿರಾರು ಜನರು ಅವರ ಭಾಷಣವನ್ನು ಕೇಳಲು ಬರುತ್ತಿದ್ದರು .



ಹೆಲೆನ್ ಕೆಲ್ಲೆರ್ ಯುರೋಪ್ ಮತ್ತು ಜಪಾನಿಗೂ ಹೋದರು. ಹೆಲೆನ್ ಮಹಿಳಾ ಹಕ್ಕುಗಳ ಮೆರವಣಿಗೆಯಲ್ಲಿ ಭಾಗವಹಿಸಿದರು. ಅವರು ಕಾರ್ಮಿಕರು ಮತ್ತು ಬಡವರ ಅಗತ್ಯಗಳ ಬಗ್ಗೆ ಬರೆದರು.





ಎರಡನೇ ಮಹಾಯುದ್ಧದ ಸಮಯದಲ್ಲಿ ಮತ್ತು ನಂತರ, ಯುದ್ಧದಲ್ಲಿ ಅಂಧ ಮತ್ತು ಕಿವುಡರಾಧ ಸೈನಿಕರನ್ನು ಭೇಟಿ ಮಾಡಲು ಹೆಲೆನ್ ಹೋದಳು. ಹೆಲೆನ್ ಅವರು ತಾವು ಕೂಡ ಸಂಪೂರ್ಣ ಮತ್ತು ಸಂತೋಷದ ಜೀವನ ನಡೆಸಬಹುದು ಎಂಬ ಭರವಸೆಯನ್ನು ಮೂಡಿಸಿದರು



ತನಗೆ ಉತ್ತಮ ಸ್ನೇಹಿತರಿದ್ದಾರೆ ಮತ್ತು ಮಾಡಲು ಆಸಕ್ತಿದಾಯಕ ಕೆಲಸಗಳಿವೆ, ಅದಕ್ಕಾಗಿಯೇ ಅವಳು ಸಂತೋಷವಾಗಿರಲು ಸಾಧ್ಯವಾಗುತ್ತದೆ ಎಂದು ಹೆಲೆನ್ ಕೆಲ್ಲೆರ್ ಅವರಿಗೆ ಹೇಳಿದರು.



೧೯೬೪ರಲಿ, ಹೆಲ್ಲೆನ್ ಕೆಲ್ಲೆರ್ ಅವರಿಗೆ ಉತ್ತಮ ಕಾರ್ಯಕಾಗಿ ಅಧ್ಯಕ್ಷ ಲಿಂಡನ್ ಜಾನ್ಸನ್ ಅವರು "ಅಧ್ಯಕ್ಷೀಯ ಮೆಡಲ್ ಆಫ್ ಫ್ರೀಡಂ" ಅನ್ನು ನೀಡಿ ಗೌರವಿಸಿದರು



೧ ಜೂನ್ ೧೯೬೮ರ ದಿನ ಹೆಲೆನ್ ಕೆಲ್ಲೆರ್ ಅವರ ನಿಧಾನವಾಯಿತು. ಎಲ್ಲೆಡೆ ಜನರು ಅವರಿಗಾಗಿ ಕಣ್ಣೀರು ಸುರಿಸಿದರು. ಅವಳು ನೋಡಲೂ ಆಗದ ಕೇಳಲೂ ಆಗದ ಜನರ ಲೋಕ ಅವಳನ್ನು ಪ್ರೀತಿಸುತ್ತಿತ್ತು. ಮತ್ತು ಹೆಲೆನ್ ಅವರೆಲರನ್ನು ಪ್ರೀತಿಸಿದರು!

ಮಹತ್ವಪೂರ್ಣ ದಿನಾಂಕಗಳು

೨೭ ಜೂನ್ ೧೮೮೦- ಹೆಲೆನ್ ಕೆಲ್ಲೆರ್ ಟುಸ್ಕ್ಯಾಂಬಿಯಾ, ಅಲಬಾಮನಲಿ ಜನ್ಮಿಸಿದಳು .

ಫೆಬ್ರವರಿ ೧೮೮೨- ಹೆಲೆನ್ ಕೆಲ್ಲೆರ್ ಒಂದು ಕಾಯಿಲೆಯಿಂದಾಗಿ ಕುರುಡಿ ಮತ್ತು ಕಿವುಡಿಯಾದಳು.

ಮಾರ್ಚ್೧೮೮೭- ಹೆಲೆನ್ ಅನ್ನಾ ಸಲ್ಲಿವನ್ ರನ್ನು ಭೇಟಿಯಾದರು.

೧೯೦೦-ಹೆಲೆನ್ ಕೆಲ್ಲೆರ್ ರಾಡ್ಕ್ಲಿಫ್ ಕಾಲೇಜಿನ ವಿದ್ಯಾರ್ಥಿಯಾದರು. ಅವರು 'ಅಮೇರಿಕನ್ ಫೌಂಡೇಶನ್ ಫಾರ್ ದಿ ಬ್ಲೈಂಡ್ 'ಗಾಗಿ ಕೆಲಸ ಮಾಡಲು ಪ್ರಾರಂಬಿಸಿದರು.

೨೦ ಅಕ್ಟೋಬರ್ ೧೯೩೬- ಅನ್ನಾ ಸಲ್ಲಿವನ್ ಅವರು ನಿಧನರಾದರು .

೧೯೬೪- ಹೆಲ್ಲೆನ್ ಕೆಲ್ಲೆರ್ ಅವರಿಗೆ "ಅಧ್ಯಕ್ಷೀಯ ಮೆಡಲ್ ಆಫ್ ಫ್ರೀಡಂ" ಅನ್ನುನೀಡಿ ಗೌರವಿಸಿದರು.

೧ ಜೂನ್ ೧೯೬೮- ಹೆಲೆನ್ ಕೆಲ್ಲೆರ್ ಅವರ ನಿಧನ .

ಡೇವಿಡ್ ಆ. ಅಲ್ದೆರ್ ಒಬ್ಬ ಸಚಿತ್ರ ಜೀವನಚರಿತ್ರೆಗಳ ಸರಣಿಯ ಲೇಖಕ್. ಡಾ. ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ ಲೋಕಪ್ರಿಯ ರಚನೆ. ಅದಾದ ಮೇಲೆ ಇದು ಅವರ ಎರಡನೆ ಪುಸ್ತಕ.ಅವರು ತಮ್ಮ ಪರಿವಾರದೊಂದಿಗೆ ನ್ಯೂಯೊರ್ಕ್ ರಾಜ್ಯದಲ್ಲಿ ವಾಸಿಸುತ್ತಾರೆ.

ಜಾನ್ ವಾಲ್ನರ್ ಅವರ ಡಜನ್ಗಟ್ಟಲೆ ಮಕ್ಕಳ ಪುಸ್ತಕಗಳಿಗೆ ಸಚಿತ್ರ ಕಲೆ ಯನ್ನು ರೂಪಿಸಿದ್ಧರೆ. ಇದರಲ್ಲಿ ಡೇವಿಡ್ ಅವರು ಬರೆದ ಸಚಿತ್ರ ಜೀವನಿಗಳು ಸಹ ಇವೆ. ಅವರು ಮೆನ್ ನಲಿ ವಾಸಿಸುತ್ತಾರೆ. ದಿ ಹಾರ್ನ್ ಬುಕ್ ನಲ್ಲಿ ಹೆಲೆನ್ ಕೆಲ್ಲೆರ್ ಅವರ ಈ ಸಚಿತ್ರ ಪುಸ್ತಕವನ್ನು ಪ್ರಶಂಸೆ ಮಾಡುತ ಹೇಳುತ್ತಾರೆ - "ಸರಳ ಭಾಷೆ ಮತ್ತು ಜಿವಂತ್ ಚಿತ್ರ ಹೆಲೆನ್ ಅವರ ಜೀವನ ಮತ್ತು ಉಪಲಬ್ಧಿಗಳ ಮೂಲಮಾಹಿತಿಯನ್ನು ಹೊಂದಿಸುತ್ತದೆ ".